
# ‘ಪವಿತ್ರ ಪರಿವ್ರಜನ’ - ಪ್ರವಾಸಕಥನ




**ಕೃತಿ: ಪವಿತ್ರಪರಿವ್ರಜನ**
**ಲೇಖಕ : ಡಾ. ಕೆ. ಅನಂತರಾಮು**
**ಪ್ರಕಾಶನ : ವೇದಾಂತಭಾರತೀ**
**ಮೊ. 08223-262471**
**ಬೆಲೆ: 700 ಪುಟ: 608**

ಕನ್ನಡದಲ್ಲಿ ಪ್ರವಾಸಕಥನ ಎಂಬ ಗದ್ಯಪ್ರಕಾರವು ಸಾಕಷ್ಟು ಜನಪ್ರಿಯವಾಗಿದೆ; ಅನೇಕ ಉತ್ತಮ ಗ್ರಂಥಗಳೂ ಪ್ರಕಟವಾಗಿವೆ. ಆದರೆ ಇತ್ತೀಚೆಗೆ ಪ್ರಕಟಗೊಂಡಿರುವ ‘**ಪವಿತ್ರ ಪರಿವ್ರಜನ**’ ಎಂಬ ಕೃತಿಯು ವಿಶಿಷ್ಟ ಬಗೆಯ ಪ್ರವಾಸ ಕಥನ ಗ್ರಂಥವಾಗಿದೆ. ಯತಿಶ್ರೇಷ್ಠರೊಬ್ಬರು ಕೈಗೊಂಡ ‘ಆಧ್ಯಾತ್ಮಿಕ ಯಾತ್ರೆ’ಯ ಕಥನ ಇದಾಗಿದೆ; ಆದ್ದರಿಂದ ಇದು ಕೇವಲ ಪ್ರವಾಸಕಥನವಾಗಿರದೆ, ಇದರಲ್ಲಿ ಆಧ್ಯಾತ್ಮಿಕ ಭಾವಗಳು ಮಡುಗಟ್ಟಿವೆ. ಅದ್ವೈತ ಪರಂಪರೆಯ ಕೀರ್ತಿಶಿಖರವೆಂದೇ ಕರೆಯಬಹುದಾದ ಶ್ರೀಶಂಕರ ಭಗವತ್ಪಾದರೇ ಭಾರತದ ಉದ್ದಗಲ ಪರಿವ್ರಜನ ಮಾಡುತ್ತಾ ವೇದಾಂತದ ಭವ್ಯಸಂದೇಶವನ್ನು ಎಲ್ಲೆಡೆ ಸಾರಿದ್ದರು. ಅದೇ ಪರಂಪರೆಯ ಯತಿಗಳಾದ ಯಡತೊರೆ ಯೋಗಾನಂದೇಶ್ವರ ಸರಸ್ವತೀ ಮಠ, ಕೆ.ಆರ್. ನಗರದ ಶ್ರೀ ಶ್ರೀ ಶಂಕರಭಾರತೀ ಮಹಾಸ್ವಾಮಿಗಳು ೨೦೨೧ರಲ್ಲಿ ಮಾಡಿದ ಉತ್ತರ ಭಾರತ ಯಾತ್ರೆಯ ವಿಸ್ತಾರವಾದ ನಿರೂಪಣೆ ಈ ಗ್ರಂಥದಲ್ಲಿದೆ. ಕನ್ನಡದ ಹೆಸರಾಂತ ಲೇಖಕರಾದ ಡಾ.ಕೆ. ಅನಂತರಾಮು ಅವರು ತಮ್ಮ ಅನುಪಮ ನಿರೂಪಣ ಶೈಲಿಯಿಂದ ಈ ಪ್ರವಾಸಕಥನವನ್ನು ಬರೆದಿದ್ದಾರೆ. ಪ್ರವಾಸವನ್ನು ಕೈಗೊಂಡ ಪೂಜ್ಯ ಸ್ವಾಮೀಜಿಯವರಿಂದ ಹಾಗೂ ಅವರೊಂದಿಗೆ ಪ್ರವಾಸ ಮಾಡಿದ ಇತರರಿಂದ ಹತ್ತು ಹಲವು ಮಾಹಿತಿಗಳನ್ನು ಕಲೆಹಾಕಿ, ಹಲವಾರು ತಾತ್ತ್ವಿಕ-ಆಧ್ಯಾತ್ಮಿಕ ವಿಚಾರಗಳನ್ನೂ ನಿರೂಪಿಸುತ್ತ ಈ ಮಹಾನ್ ಗ್ರಂಥವನ್ನು ಲೇಖಕರು ರಚಿಸಿದ್ದಾರೆ. ಇದು ಕೇವಲ ಪ್ರವಾಸಕಥನವಾಗಿರದೆ, ಅನೇಕ ದಾರ್ಶನಿಕ, ಆಧ್ಯಾತ್ಮಿಕ ಅಂಶಗಳನ್ನು ಒಳಗೊಂಡಿರುವ ಒಂದು ಬೃಹತ್ ‘ವಿಶ್ವಕೋಶ’ವೇ ಆಗಿದೆಯೆನ್ನಬೇಕು. ಓದುಗನಿಗೆ ಯಾತ್ರೆಯ ರಸವತ್ತಾದ ವಿವರಣೆಯೊಂದಿಗೆ, ಅದ್ವೈತ ವೇದಾಂತ ಹಾಗೂ ಶ್ರೀಶಂಕರರನ್ನು ಕುರಿತ ಅನೇಕ ಮಾಹಿತಿಗಳು ಇಲ್ಲಿ ಲಭ್ಯವಾಗುತ್ತವೆ.

ಆರಂಭದಲ್ಲಿ ವಿದ್ವಾನ್ ಡಾ. ಟಿ.ವಿ. ಸತ್ಯನಾರಾಯಣ ಅವರ ವಿದ್ವತ್ಪೂರ್ಣವಾದ ಮುನ್ನುಡಿ, ‘ಲೇಖಕರ ನಿವೇದನೆ’ ಹಾಗೂ ಪ್ರಕಾಶಕರ ಮಾತುಗಳಿವೆ. ಬಳಿಕ ಎಂಟು ಅಧ್ಯಾಯಗಳಿಂದ ಕೂಡಿದ ಪ್ರವಾಸಕಥನ ಆರಂಭವಾಗುತ್ತದೆ. ಈ ಎಂಟು ಅಧ್ಯಾಯಗಳಲ್ಲಿ ಬರುವ ವಿಷಯಗಳನ್ನು ಶೀರ್ಷಿಕೆಗಳೇ ಸಂಕ್ಷಿಪ್ತವಾಗಿ ತಿಳಿಸಿಕೊಡುತ್ತವೆ: ೧) ಶ್ರೀಯೋಗಾನಂದೇಶ್ವರ ಸರಸ್ವತೀ ಮಠದ ಪೂರ್ವೇತಿಹಾಸ, ೨) ಮಠದ ವಿಕಾಸದ ಮೈಲಿಗಲ್ಲುಗಳು, ೩) ಯಾತ್ರೆಯ ಪೂರ್ವಸಿದ್ಧತೆಗಳು ಮತ್ತು ಯಾತ್ರಾರಂಭ, ೪) ಹರಿದ್ವಾರದಲ್ಲಿ ಮಾತೆಯರು ಮೊಳಗಿಸಿದ ಸೌಂದರ್ಯಲಹರಿಯ ವಿಜಯದುಂದುಭಿ, ೫) ಹರಿದ್ವಾರದ ಹಾದಿಯಲ್ಲಿ ಶ್ರೀಗಳ ಯಾತ್ರಾನುಕ್ರಮಣ, ೬) ಹರಿದ್ವಾರದದಲ್ಲಿ ಶಂಕರ ಯಶೋವೈಭವ, ೭) ಹೃಷಿಕೇಶ ಮತ್ತು ಉತ್ತರಕಾಶೀ ಯಾತ್ರೆಯ ಪುಣ್ಯಾನುಭವಗಳು, ಹಾಗೂ ೮) ಗಂಗೆಯ ತಡಿಯಿಂದ ಕಾವೇರಿಯ ಮಡಿಲಿಗೆ ಸದ್ಗುರುವಿಜಯದ ಕಥಾನಕ. ಲೇಖಕರಿಗೆ ಆಳವಾದ ಅಧ್ಯಯನದ ಹಿನ್ನೆಲೆಯಿದ್ದರೂ, ಒಂದು ಯಾತ್ರೆಗೆ ಸಂಬಂಧ ಪಟ್ಟ ಸಮಸ್ತ ಮಾಹಿತಿಗಳನ್ನೂ ಕಲೆಹಾಕಿ, ಬರಹಕ್ಕೆ ಸಂಬಂಧಿಸಿದ ಸಮಗ್ರ ವಿಚಾರಗಳನ್ನು ಮತ್ತೆ ಅಧ್ಯಯನ ಮಾಡಿ, ಈ ಗ್ರಂಥವನ್ನು ಲೇಖಕರು ರಚಿಸಿದ್ದಾರೆ. ಶ್ರಮದಾಯಕ ಕೆಲಸವನ್ನು ನಿರ್ವಹಿಸಿದ ಲೇಖಕರ ಶ್ರದ್ಧೆ, ತಾಳ್ಮೆ ಬರವಣಿಗೆಯ ಸಾಮರ್ಥ್ಯವನ್ನು ಎಷ್ಟು ಕೊಂಡಾಡಿದರೂ ಸಾಲದು. ಅದೂ ಬರಹದ ಶೈಲಿಯೋ – ಸುಲಲಿತವಾಗಿ, ರಸವತ್ತಾಗಿ ಓದಿಸಿಕೊಂಡು ಹೋಗುವ, ಒಂದಿಷ್ಟೂ ಅಸ್ಪಷ್ಟತೆಯಿಲ್ಲದ, ಸೊಗಸಾದ ಶೈಲಿ! ಗ್ರಂಥದ ಕೊನೆಗೆ ನೀಡಿರುವ ಐದು ಅನುಬಂಧಗಳು, ಓದುಗರ ಅನುಕೂಲತೆಗೆ ಲೇಖಕರು ಕೊಟ್ಟ ಬೆಲೆ ಎಂತಹದು ಎಂಬುದನ್ನು ಸೂಚಿಸುತ್ತವೆ: ಅರ್ಥಕೋಶ, ಶಬ್ದಕೋಶ, ಶ್ಲೋಕ- ಪದ್ಯಗಳ ಸೂಚಿ, ಗ್ರಂಥಸೂಚಿ, ಹಾಗೂ ವರ್ಣರಂಜಿತ ಚಿತ್ರಸಂಪುಟ.

ಯಾತ್ರೆಯ ವಿವರಣೆಗಳೊಂದಿಗೆ, ಪೂಜ್ಯ ಸ್ವಾಮೀಜಿಯವರ ಧ್ಯೇಯೋದ್ದೇಶ, ಅವರ‘ಸೌಂದರ್ಯ ಲಹರೀ’ ಅಭಿಯಾನದ ವಿವರಗಳು, ವಿವಿಧ ಪ್ರದೇಶಗಳಲ್ಲಿ ನಡೆದ ಕಾರ್ಯಕ್ರಮಗಳು, ನಡುನಡುವೆ ಭೇಟಿಯಿತ್ತ ವಿವಿಧ ದೇವಾಲಯ, ಆಶ್ರಮ, ತೀರ್ಥಕ್ಷೇತ್ರಗಳ ವಿವರಗಳು ಕೂಡ ಬರುತ್ತವೆ. ಲೇಖಕರೊಬ್ಬರು ಒಂದು ವಿಷಯವನ್ನು ಕುರಿತಂತೆ ಶ್ರದ್ಧೆ ಹಾಗೂ ಆಸಕ್ತಿಯನ್ನು ಹೊಂದಿದ್ದರೆ, ಎಂತಹ ಅದ್ಭುತ ಕೃತಿರತ್ನವೊಂದರ ರಚನೆಯಾಗುತ್ತದೆ ಎಂಬುದಕ್ಕೆ ಈ ಕೃತಿಯೇ ಅತ್ಯುತ್ತಮ ನಿದರ್ಶನವಾಗಿದೆ. ತಾವು ಸ್ವತಃ ಯಾತ್ರೆ ಮಾಡದಿದ್ದರೂ, ಪರಿವ್ರಜನ ಮಾಡಿದ ಪೂಜ್ಯ ಸ್ವಾಮೀಜಿಯವರ ಅಂತರ್ಯವನ್ನೆಲ್ಲ ಈ ಕೃತಿಯಲ್ಲಿ ಪ್ರಕಟಪಡಿಸಿದ್ದಾರೆ, ಡಾ. ಕೆ. ಅನಂತರಾಮು ಅವರು. ಪ್ರವಾಸಕಥನ ಗ್ರಂಥದ ಹೊಸ ಮಾದರಿಯನ್ನೇ ಇಲ್ಲಿ ಸೃಷ್ಟಿಸಲಾಗಿದೆ. ಕನ್ನಡ ಓದುಗರು ಅಗತ್ಯವಾಗಿ ಓದಿ ಆನಂದಿಸಬೇಕಾದ, ಆಧ್ಯಾತ್ಮಿಕ ಪರಿವ್ರಜನದ ಅನುಭವವನ್ನು ಮೈದುಂಬಿಕೊಳ್ಳಬೇಕಾದ ಕೃತಿ ಇದಾಗಿದೆ.